## ನವಿಲುಗನ್ನಡಿ

- ಸಂತೋಷಕುಮಾರ ಕುಲಕರ್ಣಿ ಅವರ ಕಲಾಕೃತಿಯ ಮುಖಪುಟವಿರುವ ಮೇ ಸಂಚಿಕೆ ಆಕರ್ಷಕವಾಗಿತ್ತು. ಎಂ.ಎಸ್. ಯಶಸ್ವಿನಿ ಅವರ 'ಪಾರಿಯ ಕೋರಿಕೆ' ವಿಶಿಷ್ಟ ಕವಿತೆ. ಕವಿ ಎಚ್.ಎಸ್. ಶಿವಪ್ರಕಾಶ್ ಅವರೊಂದಿಗಿನ ಸಂವಾದ (ಸಂದರ್ಶನ: ವಿಕ್ರಂ ವಿಸಾಜಿ) ಮುಕ್ತ ಚರ್ಚೆಯೊಂದಿಗೆ ಹೊಸ ವಿಚಾರಗಳನ್ನು ಮುಂದಿಡುತ್ತದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- 'ಕಾವ್ಯ ಮೂಲಭೂತವಾಗಿ ಮನೋಯಾತನೆ' ಎಂಬ ಕವಿ ಎಚ್.ಎಸ್. ಶಿವಪ್ರಕಾಶರ ಮಾತನ್ನು ಒಪ್ಪಲಾಗಲಿಲ್ಲ. ಅವರ ಅಭಿಪ್ರಾಯದಲ್ಲಿ ಕುವೆಂಪು ಕಾವ್ಯಭಾಷೆ ಜನಕ್ಕೆ ಅರ್ಥವಾಗಲಿಲ್ಲ ಎಂಬ ಮಾತೂ ಇದೆ. ಸರಿಯೇ, ಆದರೆ ಅಡಿಗರ ಕಾವ್ಯವೂ ನಿರೂಪಣಾ ಸಂಕೀರ್ಣತೆಯಿಂದಾಗಿ ಜನಕ್ಕೆ ಅರ್ಥವಾಗಲಿಲ್ಲವಲ್ಲ! ಈ ಕುರಿತು ಕೂಡ ಶಿವಪ್ರಕಾಶರು ಗಮನ ಹರಿಸಬೇಕಿತ್ತು.


**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

- ಈ ಸಂಚಿಕೆ ಮುದಗೊಳಿಸುವ ಕತೆಗಳ ನಕ್ಷತ್ರ ಪುಂಜ. ವಸುಮತಿ ಉಡುಪ ಅವರ 'ಬೊಗಸೆ ತುಂಬಾ ನಕ್ಷತ್ರಗಳು', ಕೇಶವ ಕುಲಕರ್ಣಿ ಅವರ 'ವೆಡ್ಡಿಂಗ್ ಆ್ಯನಿವರ್ಸರಿ', ಬಿ.ಎಲ್. ವೇಣು ಅವರ 'ಹೀಗೊಂದು ಮ್ಯೂಸಿಕಲ್ ಲವ್ ಸ್ಟೋರಿ' ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ.

**ಸುಮನಾ, ಬೆಂಗಳೂರು**

- ರವಿರಾಜ ಬೈಕಂಪಾಡಿ ಅವರ ಪತ್ತೆದಾರಿ ಕತೆ 'ಎಡಗಾಲಿನ ಬೂಟು' ಕೊನೆಯವರೆಗೂ ಕುತೂಹಲ ಕಾಯ್ದುಕೊಂಡಿದೆ.

**ಸಾವಿತ್ರಿ ಶ್ಯಾನಭಾಗ್, ಕುಂದಾಪುರ**




- ಎಚ್.ಎಸ್. ಶಿವಪ್ರಕಾಶ್ ಅವರ ಸಂದರ್ಶನ ಮತ್ತು ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಕುರಿತ ಬರಹ ಈ ಸಂಚಿಕೆಗೆ ಮೆರಗು ನೀಡಿವೆ. 'ಒಂದುತನ ಮತ್ತು ಅನೇಕತನವನ್ನು ಹಿಡಿಯುವುದು ಕಾವ್ಯದ ಮುಖ್ಯ ಕೆಲಸ' ಎನ್ನುವ ಶಿವಪ್ರಕಾಶ್ ಅವರ ಮಾತು ಬಹಳ ಇಷ್ಟವಾಯಿತು.

**ರಾಜೀವ್ ಎನ್. ಮಾಗಲ್, ಸಕಲೇಶಪುರ**

- ಪ್ರೇಮಕುಮಾರ್ ಹರಿಯಬ್ಬೆ ಅವರ ನೀಳ್ಗತೆ 'ಆಕ್ರಮಣ' ಕುಸುರಿ ಕೆಲಸದ ಸುಂದರ ಶಿಲ್ಪದಂತಿದೆ. ಬದಲಾಗುತ್ತಿರುವ ಇಂದಿನ ಗ್ರಾಮೀಣ ಜೀವನವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

**ಎಸ್.ಬಿ. ರಂಗನಾಥ್, ಸಿದ್ಧನಮಠ**

- ಗೌರಿ ಚಂದ್ರಕೇಸರಿ ಅವರ ಕತೆ 'ಸಾವಕ್ಕನ ಅರ್ಜಿ' ಇಂದಿನ ರಾಜಕಾರಣಿಗಳ ಡಾಂಬಿಕ ಜನಸೇವೆಗೆ ಕನ್ನಡಿ ಹಿಡಿಯುತ್ತದೆ; ಗ್ರಾಮವಾಸ್ತವ್ಯದ ಅಣಕದಂತಿದೆ. ಕತೆ ಸರಳವಾದರೂ ಪರಿಣಾಮಕಾರಿ.

**ಕಾವ್ಯಶ್ರೀ, ತುಮಕೂರು**